
# ನಿದ್ದೆ ಹೋಗಿದೆಯೇ?

ರಾಧೇಶ ತೋಳ್ಪಾಡಿ

ಕಲೆ: ಸಂತೋಷ್ ಸಸಿಹಿತ್ಲು



ನಿದ್ದೆ ಹೋಗಿದೆಯೇ ಮುದ್ದು ಮಗುವಂತೆ
ಸದ್ದಿರದೆ ಪುಟ್ಟ ಬೀಜ?
ಮಣ್ಣಿನೆದೆಯಲ್ಲಿ ತನ್ನ ತಾ ಮರೆತು
ಒರಗಿದೆಯೆ ದಿಟ್ಟ ತೇಜ?

ಯಾವ ಗಳಿಗೆಯಲಿ ಎಚ್ಚರಾಗುವುದು
ಎಬ್ಬಿಸುವರಾರು ನಿನ್ನ?
ಯಾರು ಹಾಡುವರು ರಾಗ ಮೋಹನವ
ಬೆಳಗಾಯ್ತು, ಏಳು, ಚಿನ್ನ!'

ಯಾವ ಅಣ್ಣಂದಿರು ಬಣ್ಣ ನೀಡುವರು
ಕನಸೊಳಗೆ ನೀರು ಹನಿಸಿ?
ಯಾವ ಅಕ್ಕಂದಿರು ಪಕ್ಕ ನಿಲ್ಲುವರು
ಭಾವಗಳ ಉಣಿಸು ತಿನಿಸಿ?

ಯಾವ ಹಕ್ಕಿಗಳು ಹಿಗ್ಗಿ ಹಾಡುವವು
'ಏಯ್! ಏಳು! ಏಳು!' ಅಂತ?
ಯಾವ ಕೋಗಿಲೆಯು ಬಯಲಿನಾಟಕ್ಕೆ
ಕರೆಯುತಿದೆ ಆರ್ತಿಯಿಂದ?

ಯಾರು ತೋರುವರು ಏರು ಹಾದಿಯನು
ಬೆಳಕುಂಟು, ಬಾನು ಎಂದು?
ಆಳ ಪಾತಾಳ ಮೂಲಕಿಳಿಯದೆಯೇ
ಏಳಿಗೆಯು ಇಲ್ಲವೆಂದು!

ಮಣ್ಣ ಹುಡಿಯೊಳಗೆ ಹೊಕ್ಕು ತಂಗಾಳಿ
ಉಲಿಯುವುದೆ ಹಗಲ ಬೆಡಗು?
ಝುಗ್ಗ ಮೈಯೊಳಗೆ ಧಿಗ್ಗನೆದ್ದಿತ್ತೆ
ಕಿಡಿಯೊಳಗೆ ಮಿಂಚು ಹರಿದು?

ಬಾಲಭಾಸ್ಕರನು ಕಿರಣಬೆರಳಿಂದ
ತಡವಿದನೆ ಮಣ್ಣ ಹೊದಿಕೆ?
ಚುಕ್ಕಿ ಚಂದ್ರಾಮ ದೀಪ ಹಿಡಿದಾರೆ
ಬಾನೂರ ಸೇರಲಿಕ್ಕೆ?

ಯಾರ ಯಾಚನೆಯು ಯಾರ ಪ್ರಾರ್ಥನೆಯು
ಎದೆ ಮುಟ್ಟಿ ನಿದ್ದೆ ತಿಳಿದು
ಬಿಚ್ಚಿಕೊಳಲಿರುವೆ ಹಚ್ಚಹಸುರಾದ
ಕುಡಿಯಾಗಿ ರೂಹು ತಳೆದು!